ಕಂಪೆನಿಯಲ್ಲಿ ಗುಲ್ಲಾಗಿತ್ತು. ಬೇರೆಯವರ ಗುಟ್ಟು ತಿಳಿದುಕೊಳ್ಳಲು ಇರುವಷ್ಟು ಕುತೂಹಲ ನಮ್ಮ ವಿಷಯವನ್ನು ಬೇರೆಯವರ ಬಾಯಿಂದ ತಿಳಿದುಕೊಳ್ಳಲು ಇರುವುದಿಲ್ಲ.

ಇಪ್ಪತ್ನಾಲ್ಕು ಗಂಟೆಗಳ ನಂತರ ಟೀವಿ ಧಾರಾವಾಹಿಗಳಂತೆ ನಿಲ್ಲಿಸಿದ ಭಾಗದಿಂದ ಮುಂದುವರಿಸಿದ ಅವಳ ನೆನೆಪಿನ ಸಾಮರ್ಥ್ಯಕ್ಕೆ 'ಭೇಷ್' ಎಂದು ಅವಳ ಮಾತಿಗೆ ಕಿವಿಯಾದೆ. ಕೈ ಮತ್ತು ಬಾಯಿ ತಮ್ಮಷ್ಟಕ್ಕೆ ತಾವು ಕೆಲಸ ಮುಂದುವರಿಸಿದ್ದವು. "ನನ್ನ ಗಂಡನಂಥ ಪರಮ ನೀಚನ ಮಗುವನ್ನು ಹೊಟ್ಟೆಯಲ್ಲಿಟ್ಟುಕೊಂಡು ಸಂತೋಷ ಪಡ್ಬೇಕೋ, ವಿಷಾದ ಪಡ್ಬೇಕೋ ನನಗೆ ತಿಳಿದಿರಲಿಲ್ಲ. ಅವನು ನನ್ನ ಬಳಿ ಪ್ರಾಣೆಗಿಂತಲೂ ಕಡೆಯಾಗಿ ನಡೆದುಕೊಳ್ತಾ ಇದ್ದ. ಅದ್ನ ನಾನು ಸಹಿಸಿಕೊಳ್ತಾ ಇದ್ದೆ. ಆದ್ರೆ ಅವನು ತನ್ನ ತಂಗಿಯನ್ನೆ ಗೆಳೆಯನಿಗೆ ಮಾರಿಬಿಟ್ಟಿದ್ದ. ಪ್ರೀತಿಯೆಂದು ನಂಬಿ, ಕರೆದಲ್ಲಿಗೆ ಹೋಗಿ, ನಕ್ಕು ಸಂತೋಷಪಡುತ್ತಾ, ತನ್ನ ಅಣ್ಣನ ಗೆಳೆಯನನ್ನು ಸಂತೋಷ ಪಡಿಸುತ್ತಿದ್ದ ನನ್ನ ನಾದಿನಿಗೆ ಗೊತ್ತೇ ಇರ್ಲಿಲ್ಲ – ಇದ್ಕೆಲ್ಲ ತನ್ನಣ್ಣ ಸಂಭಾವನೆ ತಗೋತಾ ಇದ್ದಾನೆ ಅಂತ. ಪ್ರೀತಿಯ ಹೆಸರಲ್ಲಿ ಅವಳು, ಅಣ್ಣನ ಕೀಳು ಅಭಿರುಚಿಗಳನ್ನು ಪೂರೈಸಲು ತನ್ನ ದೇಹವನ್ನು ಮಾರಿಕೊಳ್ಳುತ್ತಿದ್ದಳು ಎಂದರೆ ತಪ್ಪಾಗದು. ಸತ್ಯ ತಿಳಿದಾಗ ಅವಳ ಸ್ಥಿತಿ ಹೇಗಿರುತ್ತೋ ಆ ದೇವ್ರೇ ಬಲ್ಲ!" ಎಂದು ಮಾತು ನಿಲ್ಲಿಸಿ ಮುಖ ನೋಡಿದವಳಿಗೆ ನಾನೇನು ಪ್ರತಿಕ್ರಿಯೆ ನೀಡದೆ, ಒಳ್ಳೆಯ ಕೇಳುಗಳಾಗಿ ಕುಳಿತಿದ್ದೆ.

"ಹೊರಗೆ ಜೋರು ಮಳೆ ಬೀಳುತ್ತಿದ್ದರಿಂದ ಕರೆಂಟ್ ಇರಲಿಲ್ಲ. ನನ್ನ ಪರಮಪೂಜ್ಯ ಪತಿದೇವ ನಡುಮನೆಯಲ್ಲಿದ್ದ ದೀಪದ ಮುಂದೆ ಕುಳಿತು ಹೊಗೆಬಿಡುವುದರಲ್ಲಿ ತಲ್ಲೀನನಾಗಿದ್ದ. ಮಳೆ ಅವನನ್ನು ಹೊರಗೆ ಹೋಗದಂತೆ ಕಟ್ಟಿಹಾಕಿತ್ತು. ಅತ್ತೆ, ನಾದಿನಿ ಮದುವೆಗೆ ಹೋಗಿದ್ದರಿಂದ ಮನೆಯಲ್ಲಿ ನಾವಿಬ್ಬರೆ. ಊಟಕ್ಕೆ ಕರೆದಾಗ, 'ನೀನು ತಿಂದು ಮಲ್ಗು. ಪಾಪ ಹೊರ್ಗೆ ಕೆಲ್ಸ ಮಾಡಿರ್ತಿ, ಆಯಾಸಾಗಿರ್ತದೆ' ಎಂದವನ ಮಾತು ಕೇಳಿ ನನಗೆ ಅಚ್ಚರಿ. 'ನಾನು ಬಸುರಿ ಎಂದು ತಿಳಿತಾ?' ಎನಿಸಿತು. ಹೊಟ್ಟೆ ಉಬ್ಬಿದಾಗಲೇ ನೋಡಿಕೊಳ್ಳಲಿ ಎಂದು ನಾನು ಹೇಳಿರಲಿಲ್ಲ" ಎಂದವಳಿಗೆ ನಾನು, "ನಿಮ್ಮನ್ನು ಮದ್ವೆಯಾಗಿದ್ದೋನು ಅಷ್ಟೊಂದು..." ಮುಂದೆ ಏನು ಹೇಳಬೇಕೆಂದು ಆ ಕ್ಷಣಕ್ಕೆ ಹೊಳೆಯದೆ ಅವಳ ಮುಖ ನೋಡಿದೆ. "ನನಗೆ ತಾಳಿ ಕಟ್ಟಿದವನು ಎಂಥವನು ಎಂದು ಇವತ್ತಿಗೂ ನಂಗೆ ಅರ್ಥವಾಗಿಲ್ಲ. ಹೇಳ್ತೀನಿ, ಅವನು ಎಂಥವನೆಂದು ನೀವೇ ಊಹಿಸ್ಕೊಳ್ಳಿ" ಎಂದು ಮಾತು ಮುಂದುವರಿಸಿದಳು. "ಮಳೆ ಯಾಕೆ ಗಂಟೆಗಟ್ಟಲೆ ಬೀಳುತ್ತಿತ್ತೋ ನಾನರಿಯೆ. ಸುರಿಯುತ್ತಿರುವ ಮಳೆಗೆ ವಾತಾವರಣ ತಂಪಾಗಿ, ಹಿತವಾಗಿ ಚಳಿಯಾಗುತ್ತಿದ್ದುದರಿಂದ, ಆಯಾಸಗೊಂಡಿದ್ದ ನನ್ನ ದೇಹಕ್ಕೆ ಅದ್ಯಾವಾಗ ನಿದ್ದೆ ಬಂತೋ ಗೊತ್ತಿಲ್ಲ. ನಿದ್ದೆಯ ಮಂಪರಿನಲ್ಲಿ ನನ್ನ ಮೇಲಾಡುತ್ತಿರುವ ಕೈ ಸ್ಪರ್ಶಕ್ಕೆ ನನಗೆ ಗಾಬರಿಯೇನೂ ಆಗಲಿಲ್ಲ. ಆದರೆ, ಮೂಗಿಗೆ ಯಾವುದೋ ಅಪರಿಚಿತ ಪರಿಮಳ ಬಂದಾಗ, ಗಾಬರಿಯಾಗಿ ಎಚ್ಚರವಾಯ್ತು. ಭಯದಿಂದ ಏಳಹೋದರೆ ಆಗುತ್ತಲೇ ಇಲ್ಲ. ನನ್ನ ಕೈಕಾಲು ಕಟ್ಟಿರುವುದು ನಿಧಾನವಾಗಿ ಅರಿವಾಗಿ, ಭಯ, ಗಾಬರಿ, ಆತಂಕ ಒಟ್ಟಿಗೆ ಆಗಿ ಕಿರುಚಲು ಬಾಯಿ ತೆಗೆಯಲು ಹೋದರೆ, ಆಗುತ್ತಿಲ್ಲ. ಅವನು ನಡೆಸುತ್ತಿದ್ದ ಆಕ್ರಮಣಕ್ಕೆ ನಾನು ವಿರೋಧ ಮಾಡದೆ ಸಹಕರಿಸುತ್ತಿದ್ದರೂ, ಈ ರೀತಿ ಕೈಕಾಲು ಕಟ್ಟಿ ಬಲಾತ್ಕಾರ ಮಾಡುವ ಆವಶ್ಯಕತೆ ಏನಿತ್ತು?" ಎಂದವಳ ಮಾತು ಕೇಳಿ ನನ್ನ ಕೈ ಮತ್ತು ಬಾಯಿ ಎರಡು ತಟಸ್ಥವಾದವು. ನನ್ನ ಕಣ್ಣುಗಳು ನೇರವಾಗಿ ಅವಳ ಮುಖ ನೋಡಿದವು. ಅವಳ ಕಣ್ಣು ಇನ್ನೇನು ತುಂಬಿ ಕೋಡಿಯಾಗುವುದರಲ್ಲಿದ್ದವು. ಹೇಗೆ ಎಂದು ಹೇಳಲಾಗದ ರೀತಿಯ ನೋಟವೊಂದನ್ನು ನನ್ನತ್ತ ಬೀರಿ ನೆಲ ನೋಡಿದ ಆ ಕಣ್ಣುಗಳಿಂದ ಪಟಪಟನೆ ಹನಿಗಳು